ಅಸಲು ದಾವಾ ಸಂಖ್ಯೆ ಃ 243/2016

ಪಿಡಬ್ಲ್ಯೂ ಃ 1

ದಿನಾಂಕ ಃ 22.01.2018 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ವಾದಿ ಪರ ವಕೀಲರಾದ : ಶ್ರೀ. ಬಿ ಆರ್ ಎಸ್ ರವರಿಂದ

ನಾನು ಈ ಕೇಸಿನಲ್ಲಿ ವಾದಿಯಾಗಿದ್ದು ನನ್ನ ಮುಖ್ಯ ವಿಚಾರಣೆಯ ಬದಲಾಗಿ ಪ್ರಮಾಣಪತ್ರವನ್ನು ಸಲ್ಲಿಸಿದ್ದು ಅದರಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿದ್ದು ಸದರಿ ಪ್ರಮಾಣ ಪತ್ರದ ವಿಷಯಗಳನ್ನು ನಾನೇ ಸ್ವತಃ ನನ್ನ ವಕೀಲರಿಗೆ ಹೇಳಿ, ಬರೆಸಿ, ಓದಿ, ತಿಳಿದುಕೊಂಡು ಸಹಿ ಮಾಡಿರುತ್ತೇನೆ. ಅದರಲ್ಲಿರುವ ಸಹಿ ನನ್ನದೇ ಎಂದು ಪ್ರಮಾಣೀಕರಿಸುತ್ತೇನೆ.

ದಾವಾ ಆಸ್ತಿಗೆ ಸಂಬಂಧಿಸಿದಂತೆ ಮ್ಯೂಟೇಷನ್ ರಿಜಿಸ್ಟರ್ ಪ್ರತಿ ಎಂ ಆರ್ ನಂ.17/2005-06ರ ದೃಢೀಕೃತ ನಕಲನ್ನು ಹಾಜರುಪಡಿಸಿದ್ದೇನೆ. ಅದನ್ನು ನಿಪಿ.1 ಎಂದು ಗುರುತಿಸಲಾಯಿತು. ದಾವಾ ಆಸ್ತಿಗೆ ಸಂಬಂಧಿಸಿದಂತೆ 2015-16ನೇ ಸಾಲಿನ ಒಂದು ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದೇನೆ. ಅದನ್ನು ನಿಪಿ.2 ಎಂದು ಗುರುತಿಸಲಾಯಿತು. ಪ್ರತಿವಾಗಳಿಗೆ ನನ್ನ ವಕೀಲರ ಮೂಲಕ ನೀಡಿದ ನೋಟೀಸಿನ ಕಛೇರಿ ಪ್ರತಿಯನ್ನು ಹಾಜರುಪಡಿಸಿದ್ದೇನೆ. ಅದನ್ನು ನಿಪಿ.3 ಎಂದು ಗುರುತಿಸಲಾಯಿತು. ನಿಪಿ.3ಕ್ಕೆ ಸಂಬಂಧಿಸಿದಂತೆ 3 ಅಂಚೆ ರಸೀದಿಗಳನ್ನು 1 ವಾಪಸ್ ಆದ ಅಂಚೆ ಲಕೋಟೆಯನ್ನು ಹಾಜರುಪಡಿಸಿದ್ದೇನೆ. ಅವುಗಳನ್ನು ಕ್ರಮವಾಗಿ ನಿಪಿ.4 ರಿಂದ 7 ಎಂದು ಗುರುತಿಸಲಾಯಿತು. ನಿಪಿ.3ಕ್ಕೆ ಪ್ರತಿವಾದಿಗಳು ನೀಡಿರುವ ಉತ್ತರದ ನೋಟೀಸಿನ ಪ್ರತಿಯನ್ನು ಹಾಜರುಪಡಿಸಿದ್ದೇನೆ. ಅದನ್ನು ನಿಪಿ.8 ಎಂದು ಗುರುತಿಸಲಾಯಿತು. ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಕೋರಿದ್ದು ಆಲಿಸಿ ನೀಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಸರಿ ಇದೆ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ

ಗುಬ್ಬಿ